ಶ್ರೀ ಎಂ ಚಂದ್ರಶೇಖರ್ —ನಮ್ಮ ಇಲಾಖೆ ಕಾರ್ಯದರ್ಶಿಯವರ ನೇತೃತ್ವದ ಸಮಿತಿ ಶೇಕಡ ೫೦ ರಷ್ಟು ಮಾಡಬೇಕೆಂದು ವರದಿ ಕೊಟ್ಟಿದೆ. ಸರ್ಕಾರಕ್ಕೆ ಸಮಿತಿ ವರದಿ ಕೊಟ್ಟಿದೆ. ಸರ್ಕಾರದ ನಾನಾ ಇಲಾಖೆಗಳು ಇದನ್ನು ಪರಿಶೀಲನೆ ಮಾಡಬೇಕು.

SRI M. VEERAPPA MOILY.—That is because of the local candidates formula We want a separate independent formula for the contract teachers.

ಶ್ರೀ ಎಂ. ಚಂದ್ರಶೇಖರ್.—ಇದಲ್ಲದೆ ಅನುಕೂಲವಾಗುವ ರೀತಿಯಲ್ಲಿ ಬೇರೆ ಏನಾದರೂ ಸಲಹೆ ಸೂಚನೆಗಳು ನಮ್ಮ ಇಲಾಖೆಗಳ ಮುಖಾಂತರ ಬಂದರೆ ಸರ್ಕಾರ ಒಪ್ಪಿಕೊಂಡು ಆ ರೀತಿಯಾಗಿ ಮಾಡುತ್ತೇವೆ. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ.

ಅಧ್ಯಕ್ಷರು.—ವಿಷಯ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೀಗೆ ನೀವು ಗಡಿಬಿಡಿ ಮಾಡಿದರೆ ಹೇಗೆ ? ಅವರು ಏನೂ ಆಶ್ವಾಸನೆ ಕೊಟ್ಟಿಲ್ಲ. ಪರ್ಮನೆಂಟ್ ಮಾಡುತ್ತೇವೆಂದು ಹೇಳಿಲ್ಲ I am very sorry...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ —ಏನು ಪರಿಹಾರ ಕೊಟ್ಟರು ಸರ್ಕಾರದವರು ? ಅವರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸರ್ಕಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಅಸಮರ್ಥವಾಗಿದೆ. ಇದನ್ನು ಪ್ರತಿಭಟನೆ ಮಾಡಿ ನಾವು ವಾಕ್ ಔಟ್ ಮಾಡುತ್ತೇವೆ.

(ಕಾಂಗ್ರೆ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ —ಈ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವೂ ವಾಕ್ ಔಟ್ ಮಾಡುತ್ತೇವೆ. ಸತ್ಯಾಗ್ರಹ ಮಾಡುತ್ತಿರುವವರನ್ನು ಹೋಗಿ ನೋಡುವಂಥಾ ಸೌಜನ್ಯವೂ ಇವರಿಗಿಲ್ಲ.

(ಭಾರತೀಯ ಜನತಾ ಪಕ್ಷದ ಸದಸ್ಯರೂ ಸಭಾತ್ಯಾಗ ಮಾಡಿದರು. ಅವರ ಜೊತೆಗೆ ಸಿ. ಪಿ. ಐ ಮತ್ತು ಸಿ ಪಿ. ಎಂ ಪಕ್ಷದ ಸದಸ್ಯರೂ ಕೂಡ ಸರ್ಕಾರದ ನೀತಿಯನ್ನೂ ಪ್ರತಿಭಟಿಸಿ ಸಭಾತ್ಯಾಗದಲ್ಲಿ ಭಾಗವಹಿಸಿದರು.)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ. ಕಾಂಟ್ರಾಕ್ಟ್ ಅಪಾಯಿಂಟ್‌ಮೆಂಟ್‌ಗಳನ್ನು ಕನ್‌ಫರ್ಮೇಷನ್ ಮಾಡತಕ್ಕ ಬಗ್ಗೆ ಅಥವಾ ರೆಗ್ಯುಲರೈಸ್ ಮಾಡುವ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ಎಂ. ಚಂದ್ರಶೇಖರ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ಅತ್ಯಂತ ಶೀಘ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ, ವಿರೋಧ ಪಕ್ಷದ ಧುರೀಣರಿಗೆ ಉತ್ತರದಿಂದ ಸಮಾಧಾನ ಆಗದೇ ಇರಬಹುದು. ಇಷ್ಟು ಮಾತ್ರ ಹೇಳುತ್ತೇನೆ. ಅವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೆ ಇದೆ. ಅತ್ಯಂತ ಶೀಘ್ರವಾಗಿ ನಿರ್ಧಾರ ತೆಗೆದು ಕೊಳ್ಳುತ್ತೇವೆ. ಕಾಂಟ್ರಾಕ್ಟ್ ಅಪಾಯಿಂಟ್‌ಸ್ಲೆರತಕ್ಕ ಸೇವಕರ ಭವಿಷ್ಯವನ್ನು ಪಾಳು ಮಾಡ ಬೇಕು ಎಂಬ ಉದ್ದೇಶ ನಮಗಿಲ್ಲ, ಕಾನೂನಿನ ತೊಡಕಿರುವುದರಿಂದ ತಡ ಆಗುತ್ತಿದೆ. ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತಗೆದುಕೊಳ್ಳುತ್ತೇವೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ಕುರಿತು ಚರ್ಚೆ ಮಾಡಲು ಪತ್ರ ಕಳುಹಿಸಿದ ಮೇಲೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಮಾತನಾಡುವ ವಿಷಯಕ್ಕೆ ನಮ್ಮ ಆಭ್ಯಂತರ ಇಲ್ಲ. ಆ ಚರ್ಚೆ ನಡೆಯಲಿ. ಆದರೆ ಪ್ರಿವಿಲೈಜ್ ಮೋಷನ್